**B**

**CCE RR/PR/**
**NSR/NSPR**
**Full Syllabus**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಜೂನ್ 2024 ರ ಪರೀಕ್ಷೆ - 2**

**JUNE 2024 EXAMINATION - 2**

# ಮಾದರಿ ಉತ್ತರಗಳು

# MODEL ANSWERS

**ಸಂಕೇತ ಸಂಖ್ಯೆ : 01-K** **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / NSR / NSPR)**

**ದಿನಾಂಕ : 14. 06. 2024 ]** **[ ಗರಿಷ್ಠ ಅಂಕಗಳು : 100**

**Date : 14. 06. 2024 ]** **[ Max. Marks : 100**

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | **6 × 1 = 6** |
| 1. | ವಿಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಿದು<br>(ಎ) ಎಚ್ಚರ (ಬಿ) ಉಷ್ಣ<br>(ಸಿ) ಕಣ್ಣಿಗೆ (ಡಿ) ಬಟ್ಟೆ<br>*ಉತ್ತರ :* (ಬಿ) ಉಷ್ಣ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | 'ಮದೋನ್ಮತ್ತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಲೋಪ ಸಂಧಿ (ಬಿ) ಆದೇಶ ಸಂಧಿ<br>(ಸಿ) ಆಗಮ ಸಂಧಿ (ಡಿ) ಗುಣ ಸಂಧಿ<br>***ಉತ್ತರ :*** (ಡಿ) ಗುಣ ಸಂಧಿ | |
| 3. | ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸಲಾಗುವ ಲೇಖನ ಚಿಹ್ನೆ<br>(ಎ) ಅಲ್ಪವಿರಾಮ (ಬಿ) ಪೂರ್ಣವಿರಾಮ<br>(ಸಿ) ಪ್ರಶ್ನಾರ್ಥಕ (ಡಿ) ವಿವರಣಾತ್ಮಕ<br>***ಉತ್ತರ :*** (ಡಿ) ವಿವರಣಾತ್ಮಕ | |
| 4. | ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ<br>(ಎ) ಮಿಶ್ರವಾಕ್ಯ (ಬಿ) ಸರಳವಾಕ್ಯ<br>(ಸಿ) ಸಾಮಾನ್ಯ ವಾಕ್ಯ (ಡಿ) ಸಂಯೋಜಿತ ವಾಕ್ಯ<br>***ಉತ್ತರ :*** (ಎ) ಮಿಶ್ರವಾಕ್ಯ | |
| 5. | 'ಸಪ್ತಮೀ' ವಿಭಕ್ತಿಯ ಕಾರಕಾರ್ಥವಿದು<br>(ಎ) ಕರಣಾರ್ಥ (ಬಿ) ಅಧಿಕರಣ<br>(ಸಿ) ಸಂಪ್ರದಾನ (ಡಿ) ಅಪಾದಾನ<br>***ಉತ್ತರ :*** (ಬಿ) ಅಧಿಕರಣ | |
| 6. | 'ರಾಜೀವಸಖ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ತತ್ಪುರುಷ ಸಮಾಸ (ಬಿ) ಅಂಶಿ ಸಮಾಸ<br>(ಸಿ) ಬಹುವ್ರೀಹಿ ಸಮಾಸ (ಡಿ) ಗಮಕ ಸಮಾಸ<br>***ಉತ್ತರ :*** (ಸಿ) ಬಹುವ್ರೀಹಿ ಸಮಾಸ | |
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 7. | ಚೀರ : ಸೀರೆ :: ಯುದ್ಧ : ........................ .<br>***ಉತ್ತರ :*** ಜುದ್ದ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಓಡು ಓಡು : ದ್ವಿರುಕ್ತಿ :: ಧೀರಶೂರ : ......................... .<br>**ಉತ್ತರ :** ಜೋಡುನುಡಿ | |
| 9. | ಪರ್ವತ : ರೂಢನಾಮ :: ವಿದ್ವಾಂಸ : ......................... .<br>**ಉತ್ತರ :** ಅನ್ವರ್ಥನಾಮ | |
| 10. | ಹೀಂಗ : ಹೀಗೆ :: ಇಸವಾಸ : ......................... .<br>**ಉತ್ತರ :** ವಿಶ್ವಾಸ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **7 × 1 = 7** |
| 11. | ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು ?<br>**ಉತ್ತರ :**<br>ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ 'ಚೇರಿಂಗ್ ಕ್ರಾಸ್.' | |
| 12. | ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ ?<br>**ಉತ್ತರ :**<br>ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ ಬಗೆಯ ಕೊಳೆಯನ್ನೆಲ್ಲ ಹಿತವಚನವು ತೊಳೆದು ಬಿಡುತ್ತದೆ. | |
| 13. | 'ಗುರುಪೂರ್ಣಿಮಾ' ದಿನದಂದು ಲೇಖಕರು ಯಾವುದನ್ನು ಪೂಜಿಸುತ್ತಾರೆ ?<br>**ಉತ್ತರ :**<br>'ಗುರುಪೂರ್ಣಿಮಾ' ದಿನದಂದು ಲೇಖಕರು 'ಧ್ವಜವನ್ನೇ ಗುರು' ವೆಂದು ಭಾವಿಸಿ ಪೂಜಿಸುತ್ತಾರೆ. | |
| 14. | ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?<br>**ಉತ್ತರ :**<br>ವೃಕ್ಷವು ಸಾಕ್ಷಿ ಹೇಳುವುದೆಂಬ ಮಾತನ್ನು ಕೇಳಿ ಧರ್ಮಾಧಿಕರಣರು ವಿಸ್ಮಯ ಹೊಂದಿದರು. | |
| 15. | ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?<br>**ಉತ್ತರ :**<br>ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ. | |
| 16. | ದಿನಪಸುತ ಎಂದರೆ ಯಾರು ?<br>**ಉತ್ತರ :**<br>ದಿನಪಸುತ ಎಂದರೆ ಕರ್ಣ. | |
| 17. | 'ಬಿಲ್ಲಹಬ್ಬ'ವನ್ನು ರಚಿಸಿದ ಕವಿ ಯಾರು ?<br>**ಉತ್ತರ :**<br>'ಬಿಲ್ಲಹಬ್ಬ'ವನ್ನು ರಚಿಸಿದ ಕವಿ ಮೂಲ್ಕಿಯ ವಾಸುದೇವ ಪ್ರಭು. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **IV.** | **ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು) :** | **10 × 2 = 20** |
| 18. | ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?<br>***ಉತ್ತರ :***<br>ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ಕಾಂತಿಯನ್ನು ಕಳೆದುಕೊಂಡರೆ, ಕಾಂತಿ ನೀಡುವವರು ಯಾರು ? ರಾಮನೇ ಧೈರ್ಯವನ್ನು ಕಳೆದುಕೊಂಡರೆ ಧೈರ್ಯ ನೀಡುವವರು ಯಾರು ? ಧೈರ್ಯವಾಗಿರು ಎಂಬುದಾಗಿ ಲಕ್ಷ್ಮಣನು ರಾಮನನ್ನು ಸಂತೈಸಿದನು. | |
| 19. | ದುಡ್ಡಿನ ನಿಜರೂಪಗಳಾವುವು ?<br>***ಉತ್ತರ :***<br>ದುಡ್ಡು ಆಸೆಯ ವಿಷಲತೆಗೆ ಎರೆಯುವ ನೀರು, ಇಂದ್ರಿಯಗಳೆಂಬ ಜಿಂಕೆಗಳನ್ನು ಮರುಳುಗೊಳಿಸುವ ಬೇಡನ ಸಂಗೀತ. ಒಳ್ಳೆಯ ನಡತೆಯೆಂಬ ಚಿತ್ರಕ್ಕೆ ಬಳಿದ ಮಸಿ. ಅವಿವೇಕದ ಸವಿನಿದ್ದೆಗೆ ಹಾಸಿದ ಮೆಲುಹಾಸೆ. ಅಹಂಕಾರದ ಪಿಶಾಚಿಗಳಿಗೆ ನೆಲೆಮನೆಯಾದ ಹಳೆಯಟ್ಟ. ಶಾಸ್ತ್ರದ ತಿಳಿವಿಗೆ ಬಿಗಿದ ಕಣ್ಪಟ್ಟಿ. ಎಲ್ಲ ದೌರ್ಜನ್ಯಗಳ ವಿಜಯಧ್ವಜ. ಕೋಪವೆಂಬ ಮೊಸಳೆಯನ್ನು ಹೊತ್ತ ಹೊಳೆ. ವಿಷಯ ಮದ್ಯಗಳ ಪಾನಭೂಮಿ. ಸಜ್ಜನಿಕೆಗೆ ಬೀಸಿದ ಬೆತ್ತ. ಒಳ್ಳೆಯತನವೆಂಬ ಕಲಹಂಸಗಳನ್ನು ಓಡಿಸುವ ಬಿರುಮಳೆ. ಸಜ್ಜನಿಕೆಯನ್ನು ಸುಡುವ ಮಸಣ. ಧರ್ಮವೆಂಬ ಚಂದ್ರಮಂಡಲವನ್ನು ಕಬಳಿಸುವ ರಾಹುವಿನ ಕರಿನಾಲಿಗೆ. ಇವು ದುಡ್ಡಿನ ನಿಜರೂಪಗಳು. | |
| 20. | ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ ?<br>***ಉತ್ತರ :***<br>ಸರ್ ಎಂ. ವಿಶ್ವೇಶ್ವರಯ್ಯನವರು ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. 'ಶಿಕ್ಷಣವು ಸಂಜೀವಿನಿಯಿದ್ದಂತೆ' ಎಂಬುದನ್ನರಿತಿದ್ದ ಅವರು, "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ. | |
| 21. | ಜನರು ಮೂರ್ತಿಪೂಜೆ ಮಾಡಲು ಕಾರಣವೇನು ?<br>***ಉತ್ತರ :***<br>'ತತ್ತ್ವ'ವೇ ನಮ್ಮ ಆದರ್ಶವಾಗಿರಬೇಕು ಎಂಬುದು ನಿಜವಾದರೂ, ತತ್ತ್ವದ | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪ್ರತಿಪಾದನೆಯನ್ನು ಆಚರಣೆಯಲ್ಲಿ ತರುವುದು ಅಷ್ಟೇ ಕಠಿಣ. ಸಮಾಜದಲ್ಲಿ ಮೂರ್ತಿ ಪೂಜೆಯು ರೂಢಿಯಲ್ಲಿ ಬಂದಿರುವುದಕ್ಕೂ ಇದೇ ಕಾರಣ. ಅದೃಶ್ಯ, ಅವ್ಯಕ್ತ ಹಾಗೂ ಅಸ್ಪಷ್ಟ ವಿಶ್ವಚಾಲಕ ಶಕ್ತಿಯನ್ನು ನಿರ್ಗುಣ ಮತ್ತು ನಿರಾಕಾರ ರೂಪದಲ್ಲಿ ಪೂಜೆ ಮಾಡುವುದು ಎಲ್ಲರಿಗೂ ಸಾಧ್ಯವಿಲ್ಲ. ಆದ್ದರಿಂದ ಆ ವಿಶ್ವವ್ಯಾಪಿ ಶಕ್ತಿಯನ್ನೇ ದೃಶ್ಯರೂಪವಾಗಿ ಭಾವಿಸಿ ಮೂರ್ತಿಯನ್ನು ಜನರು ಪೂಜಿಸುತ್ತಾರೆ. | |
| 22. | 'ಕೃಷ್ಣನು ಕೌರವೇಂದ್ರನನ್ನು ಕೊಂದನು' ಎಂದು ಕರ್ಣನು ಹೇಳಲು ಕಾರಣವೇನು ? | |
| | ***ಉತ್ತರ :*** | |
| | ಕೃಷ್ಣನಿಂದ ತನ್ನ ಜನ್ಮರಹಸ್ಯ ಕೇಳಿ ತಿಳಿದ ಕರ್ಣನು "ಹೇ ಕೃಷ್ಣ, ನಿನಗೆ ಮರುಳು. ನಾನು ಈ ರಾಜ್ಯವೆಂಬ ಸಿರಿಗೆ ಸೋಲುವವನಲ್ಲ. ಪಾಂಡವರು ಹಾಗೂ ಸುಯೋಧನರಿಂದ ಓಲೈಸಿಕೊಳ್ಳಲು ನನಗೆ ಮನಸ್ಸಿಲ್ಲ. ಇದುವರೆಗೂ ನನ್ನನ್ನು ಪೊರೆದ ನನ್ನೊಡೆಯನಾದ ದುರ್ಯೋಧನನಿಗೆ ಅವನ ಶತ್ರುಗಳಾದ ಪಾಂಡವರ ಶಿರಗಳನ್ನು ಕತ್ತರಿಸಿ ತಂದು ಒಪ್ಪಿಸಬೇಕೆಂಬ ಉತ್ಸಾಹದಲ್ಲಿದ್ದೆನು. ನನ್ನ ಜನ್ಮರಹಸ್ಯವನ್ನು ತಿಳಿಸಿ ಕೌರವೇಂದ್ರನನ್ನು ಕೊಂದೆ ನೀನು" ಎಂದನು. | |
| 23. | ಪಾರ್ಥ-ಭೀಮರನ್ನು ಕೊಂದ ಬಳಿಕ ಯುಧಿಷ್ಠಿರನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳಲು ಕಾರಣವೇನು ? | |
| | ***ಉತ್ತರ :*** | |
| | ಭೀಷ್ಮರ ಆಶೀರ್ವಾದ ಪಡೆಯಲು ಬಂದ ದುರ್ಯೋಧನನಿಗೆ ಭೀಷ್ಮರು ಪಾಂಡವರೊಂಡನೆ ಸಂಧಿ ಮಾಡಿಕೊಳ್ಳಲು ಹೇಳುತ್ತಾರೆ. ಆಗ ದುರ್ಯೋಧನನು ನನ್ನ ಪ್ರೀತಿಯ ತಮ್ಮನಾದ ದುಶ್ಶಾಸನನನ್ನು ಕೊಂದ ಭೀಮ ಹಾಗೂ ಪ್ರೀತಿಯ ಗೆಳೆಯನಾದ ಕರ್ಣನನ್ನು ಕೊಂದ ಅರ್ಜುನರು ಬದುಕಿರುವವರೆಗೆ ಸಂಧಿಗೆ ಒಪ್ಪಲಾರೆ. ಮೊದಲು ಅವರಿಬ್ಬರನ್ನು ಕೊಂದು, ನನ್ನ ಕೋಪ ಆರಿದ ಬಳಿಕ ಯುಧಿಷ್ಠಿರನೊಡನೆ ಸಂಧಿ ಮಾಡಿಕೊಳ್ಳುವುದಾಗಿ ಹೇಳುತ್ತಾನೆ. | |
| 24. | 'ಅನ್ ಟು ದಿಸ್ ಲಾಸ್ಟ್' ಗ್ರಂಥದ ಸಿದ್ಧಾಂತಗಳನ್ನು ಗಾಂಧೀಜಿಯವರು ಹೇಗೆ ತಿಳಿದರು ? | |
| | ***ಉತ್ತರ :*** | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | 'ಅನ್ ಟು ದಿಸ್ ಲಾಸ್ಟ್' ಗ್ರಂಥದ ಸಿದ್ಧಾಂತಗಳನ್ನು ಗಾಂಧೀಜಿಯವರು ಹೀಗೆ ತಿಳಿದರು.<br>— ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ.<br>— ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ.<br>— ಶ್ರಮಜೀವಿಯ ಜೀವನ, ಉಳುವವನ ಅಥವಾ ಕೈಕಸುಬುಗಾರನ ಜೀವನವೇ ಯೋಗ್ಯ ಜೀವನ. | |
| 25. | ಭಗತ್‌ಸಿಂಗ್ ಹೇಗೆ ಅಮರನಾದನು ?<br>***ಉತ್ತರ :***<br>ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾಗಿದ್ದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್‌ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಮರಣದಂಡನೆಗೆ ಈಡಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರೊಂದಿಗೆ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು. | |
| 26. | 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?<br>***ಉತ್ತರ :***<br>'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಮೈತುಂಬಿ ನಿಂತಿವೆ. ಹಕ್ಕಿಗಳು ರೆಕ್ಕೆಬಿಚ್ಚಿ ಹಾರುತ್ತಿವೆ. ಕೋಗಿಲೆಗಳು ಮನದುಂಬಿ ಸುಶ್ರಾವ್ಯವಾಗಿ ಹಾಡುತ್ತಿದೆ. ಇಳೆಗೆ ಕಡಲುಕ್ಕಿ ಹರಿಯುವ ಸಂಭ್ರಮ ಹೀಗೆ ಪ್ರಕೃತಿಯ ಸಂಭ್ರಮವನ್ನು ವರ್ಣಿಸಲಾಗಿದೆ. | |
| 27. | ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು ?<br>***ಉತ್ತರ :***<br>ಮಲೆನಾಡಿನ ಕಾಡುಗಳಲ್ಲಿ ಬೂದು ಬಣ್ಣದ ತೊಡಕಲು ಕುಡಿಯನ್ನು ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡುತ್ತಿದ್ದರು. ಇದನ್ನು ಎಣ್ಣೆಯಲ್ಲಿ ಅದ್ದಿ ನಿತ್ಯವೂ ಆರತಿಗೆ ಬಳಸುತ್ತಿದ್ದರು. ಅಡಿಕೆ, ತೆಂಗಿನ ತೋಟ, ಹಳ್ಳದಂಚುಗಳಲ್ಲಿ ನಾಗಸಂಪಿಗೆ ಮರಗಳಿದ್ದವು. ಅವುಗಳ ಬೀಜ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸಂಗ್ರಹಿಸಿ ದೀಪಕ್ಕೆ ಬಳಸುತ್ತಿದ್ದರು. ಇದರ ಹಸಿಬೀಜಗಳಲ್ಲಿ ಎಣ್ಣೆಯ ಅಂಶ ಜಾಸ್ತಿಯಿರುವುದರಿಂದ ಚೆನ್ನಾಗಿ ಉರಿಯುತ್ತದೆ. ದೀಪಾವಳಿ, ಕಾರ್ತೀಕ ಮಾಸದಲ್ಲಿ ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಅಲ್ಲದೇ ಅಡಿಕೆ ತೋಟಗಳ ಅಂಚಿನಲ್ಲಿದ್ದ ಜವಾರಿ ಹತ್ತಿಯನ್ನು ದೀಪಕ್ಕೆ ಬಳಸುವ ಪರಿಪಾಠವಿತ್ತು. | |
| **V.** | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | *ಡಿ.ಎಸ್. ಜಯಪ್ಪಗೌಡ :*<br>***ಉತ್ತರ :***<br>ಡಿ.ಎಸ್. ಜಯಪ್ಪಗೌಡರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯಲ್ಲಿ ಸಾ.ಶ. ೧೯೪೭ ರಲ್ಲಿ ಜನಿಸಿದರು. ಶ್ರೀಯುತರು 'ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು, ಜನಪದ ಆಟಗಳು, ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರ 'ಕರ್ನಾಟಕದ ಕಡಲಾಚೆಯ ಸಂಪರ್ಕಗಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಧಾರವಾಡ 'ಕರ್ನಾಟಕ ಸಂಘ'ದ ಸಂಶೋಧನಾ ಬಹುಮಾನಕ್ಕೆ ಭಾಜನರಾಗಿದ್ದಾರೆ. | |
| 29. | ಕುಮಾರವ್ಯಾಸ *:*<br>***ಉತ್ತರ :***<br>ಕುಮಾರವ್ಯಾಸನೆಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪ ಗದಗ ಪ್ರಾಂತದ ಕೋಳಿವಾಡದಲ್ಲಿ ಸು.ಸಾ.ಶ. ೧೪೩೦ ರಲ್ಲಿ ಜನಿಸಿದನು. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕನ್ನಡಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕಾವ್ಯವನ್ನು ಬರೆದಿದ್ದಾನೆ. 'ಐರಾವತ' ಎಂಬ ಕೃತಿಯನ್ನು ಬರೆದಿದ್ದಾನೆಂದು ತಿಳಿದುಬಂದಿದೆ. ಈತನಿಗೆ 'ರೂಪಕಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ಇದೆ. | |
| **VI.** | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | **1 × 3 = 3** |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 30. | ಅಂಬುಜಾನನೆ ಕೇಳು ತಾಂಡವ<br>ನೆಂಬ ಮುನಿ ಪಿತೃ ಮಾತೃ ಸೇವಾ<br>ಲಂಬಕನು ತೊಳಲಿದನು ನಾನಾ ತೀರ್ಥಯಾತ್ರೆಯಲಿ<br><br>(೩) — U \| (೪) — U U \| (೩) — U \| (೪) — U U \|<br>ಅಂಬು \| ಜಾನನೆ \| ಕೇಳು \| ತಾಂಡವ \| = ೧೪ ಮಾತ್ರೆಗಳು<br>(೩) — U \| (೪) U U U U \| (೩) — U \| (೪) — — \|<br>ನೆಂಬ \| ಮುನಿ ಪಿತೃ \| ಮಾತೃ \| ಸೇವಾ \| = ೧೪ ಮಾತ್ರೆಗಳು<br>(೩) — U \| (೪) U U U U \| (೩) U U U \| (೪) — — \| (೩) — U \| (೪) — U U \| (೨) —<br>ಲಂಬ \| ಕನು ತೊಳ \| ಲಿದನು \| ನಾನಾ \| ತೀರ್ಥ \| ಯಾತ್ರೆಯ \| ಲಿ = ೨೩ ಮಾತ್ರೆಗಳು<br><br>ಛಂದಸ್ಸು : ಇದು ಮಾತ್ರಾಗಣಾಧಾರಿತ 'ಭಾಮಿನಿ ಷಟ್ಪದಿ'ಯ ಲಕ್ಷ್ಯವಾಗಿದೆ. | |
| **VII.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 31. | "ಮಾರಿಗೌತಣವಾಯ್ತು ನಾಳಿನ ಭಾರತವು"<br>***ಉತ್ತರ :***<br>ಅಲಂಕಾರದ ಹೆಸರು : ರೂಪಕಾಲಂಕಾರ<br>ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದು ರೂಪಕಾಲಂಕಾರ ಎನಿಸುತ್ತದೆ.<br>*ಸಮನ್ವಯ :* ಉಪಮೇಯ : ನಾಳಿನ ಭಾರತವು (ಯುದ್ಧ)<br>ಉಪಮಾನ : ಮಾರಿಗೌತಣ<br>ಇಲ್ಲಿ ಉಪಮೇಯವಾದ 'ನಾಳಿನ ಭಾರತ' ಹಾಗೂ ಉಪಮಾನವಾದ 'ಮಾರಿಗೌತಣ' ಇವೆರಡರ ನಡುವೆ ಅಭೇದವನ್ನು ಹೇಳಿರುವುದರಿಂದ ಇದು 'ರೂಪಕಾಲಂಕಾರ'ದ ಲಕ್ಷ್ಯವಾಗಿದೆ. | |
| **VIII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 32. | ಕೂಡಿ ಬಾಳಿದರೆ ಸ್ವರ್ಗಸುಖ.<br>**ಅಥವಾ**<br>ಬೆಳ್ಳಗಿರುವುದೆಲ್ಲ ಹಾಲಲ್ಲ. | |
| **IX.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **6 × 3 = 18** |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಪು.ತಿ. ನರಸಿಂಹಾಚಾರ್ ಅವರು ರಚಿಸಿರುವ 'ಶಬರಿ' ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸಂದರ್ಭ :*** ಹಲವು ದಿನಗಳ ಬಯಕೆಯಂತೆ ರಾಮನ ದರ್ಶನದಿಂದ ಸಂತೃಪ್ತಳಾದ ಶಬರಿ ಮುಕ್ತಿಗಾಗಿ ರಾಮನ ಅನುಮತಿ ಪಡೆದು, ವೇದಿಯಲ್ಲಿರುವ ಅಗ್ನಿಯನ್ನು ಪ್ರದಕ್ಷಿಣೆ ಹಾಕಿ ಪ್ರವೇಶಿಸುತ್ತಾಳೆ. ಆಗ ಲಕ್ಷ್ಮಣನಿಗೆ ರಾಮನು ಹೆಣ್ಣಿನ ರೀತಿಯನ್ನು ಅರಿಯುವುದೇ ಒಂದು ಸೋಜಿಗ, ಎಂಥ ನಿಷ್ಠೆ ಎಂಥ ಪ್ರೀತಿ. ಈ ಜಗತ್ತು ಈಕೆಯನ್ನು ಮರೆಯಲು ಸಾಧ್ಯವಿಲ್ಲವೆನ್ನುತ್ತಾನೆ. ಆಗ ಲಕ್ಷ್ಮಣ ಯಾರು, ಏನು ಎಂದೆನ್ನದೆ ಮಗುವಿನಂತೆ ಒಲಿದಳು. ನಮ್ಮನ್ನು ನೋಡುತ್ತಲೇ ನಲಿದಳು. ತನ್ನನ್ನೇ ತಾನು ಮರೆತಳು ಎಂದು ಹೇಳುತ್ತಾನೆ. ಆ ಸಂದರ್ಭದಲ್ಲಿ ಶ್ರೀರಾಮನು ಶಬರಿಯನ್ನು ಕುರಿತು ಲಕ್ಷ್ಮಣನಿಗೆ ಈ ಮೇಲಿನ ಮಾತನ್ನು ಹೇಳುತ್ತಾನೆ. | |
| | ***ಸ್ವಾರಸ್ಯ :*** ಶಬರಿಯ ತ್ಯಾಗ, ಪ್ರೀತಿ, ಸಮರ್ಪಣಾಭಾವ, ಭಗವದ್ ಭಕ್ತಿ ನಂಬಿಕೆ ಮೊದಲಾದವು ಇಲ್ಲಿ ಧ್ವನಿತಗೊಂಡಿದೆ. ಅಂತೆಯೇ ಶಬರಿಯು ರಾಮದರ್ಶನಕ್ಕಾಗಿ ಹಲವು ವರ್ಷಗಳಿಂದ ಪರಿತಪಿಸಿ, ಅಂತಿಮವಾಗಿ ರಾಮನ ದರ್ಶನ ಪಡೆದು, ಆ ದಿನದ ಸಂತಸದಲ್ಲಿ ಆಕೆಯ ಹಿಂದಿನ ಕಷ್ಟಗಳು ಕನವರಿಕೆಗಳು ಗೌಣವಾಗಿರುವುದು ಹಾಗೂ ಶಬರಿಯ ರಾಮಭಕ್ತಿಯ ಶ್ರೇಷ್ಠತೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| 34. | "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ವಿನಾಯಕ ಕೃಷ್ಣ ಗೋಕಾಕರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಲಂಡನ್ ನಗರವನ್ನು ನೋಡಿದ ಲೇಖಕರು ಅದರ ವರ್ಣನೆಯನ್ನು ಅದ್ಭುತವಾಗಿ ಮಾಡಿದ್ದಾರೆ. ಕೊನೆಯಲ್ಲಿ ಪ್ರವಾಸದಿಂದ ತನ್ನ ಮನಸ್ಸು ಎಷ್ಟೊಂದು ವಿಕಾಸ ಹೊಂದಿದೆ. ತನ್ನ ದೃಷ್ಟಿಯು ಎಷ್ಟೊಂದು ವಿಶಾಲವಾಗಿದೆ, | |

| | **ಪ್ರಶ್ನಾನುಸಾರ ಮೌಲ್ಯಮಾಪನ** | **ಅಂಕಗಳು** |
|---|---|---|
| | ನನ್ನ ಸಂಸ್ಕೃತಿಯು ಎಂತಹ ಒರೆಗಲ್ಲಿನ ಮೇಲೆ ನಿಂತಿದೆ ಎಂದು ಬರೆಯುವ ಸಂದರ್ಭದಲ್ಲಿ ಅವರು ಬೇಕನ್ ಕವಿಯ 'ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ' ಎಂಬ ಮಾತು ಹಾಗೂ ಷೇಕ್ಸ್‌ಪಿಯರ್ ಕವಿಯ ಮಾತುಗಳನ್ನು ನೆನಪಿಸಿಕೊಳ್ಳುವಾಗ ಈ ಮೇಲಿನ ಮಾತು ಬಂದಿದೆ. | |
| | ***ಸ್ವಾರಸ್ಯ :*** 'ದೇಶ ಸುತ್ತಿ ನೋಡು ಕೋಶ ಓದಿ ನೋಡು' ಎಂಬ ಮಾತಿನಂತೆ ಪ್ರವಾಸದಿಂದ ವ್ಯಕ್ತಿಯ ಮನಸ್ಸು, ವ್ಯಕ್ತಿತ್ವ ವಿಕಾಸವಾಗುವುದಲ್ಲದೆ ಆಲೋಚಿಸುವ ದೃಷ್ಟಿಕೋನದಲ್ಲಿ ಸಾಕಷ್ಟು ಬದಲಾಗುತ್ತದೆ. ವಿಶಾಲಚಿಂತನೆಯನ್ನು ರೂಢಿಸಿ ಕೊಳ್ಳುತ್ತಾನೆ. ದೇಶಸುತ್ತದಿದ್ದರೆ ವ್ಯಕ್ತಿಯ ಮನಸ್ಸು ಸಂಕುಚಿತವಾಗುತ್ತದೆ. ಆತ ವಿಶಾಲವಾಗಿ ಚಿಂತಿಸಲಾರ ಹಾಗೂ ಬೆಳೆಯಲಾರ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |
| 35. | "ಯಜ್ಞ ಸಂಸ್ಕೃತಿಯ ಒಂದು ಅನುಷ್ಠಾನ."<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಾ. ಆರ್. ಗಣೇಶ್‌ರವರು ಬರೆದಿರುವ 'ಶ್ರೇಷ್ಠ ಭಾರತೀಯ ಚಿಂತನೆಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಧರ್ಮದ ಆಚರಣೆಯ ಬಗ್ಗೆ ಹೇಳುವಾಗ ಲೇಖಕರು ಯಜ್ಞ ಎಂದರೆ ಬೆಲೆಬಾಳುವ ವಸ್ತುಗಳನ್ನು ಬೆಂಕಿಗೆ ಸುರಿಯುವ, ಆಹಾರವನ್ನು ಪೋಲುಮಾಡುವ ಕಂದಾಚಾರ ಎಂದು ಹಲವರು ಭಾವಿಸುತ್ತಾರೆ. ನಿಸರ್ಗಲೋಭಿಯಾದ ಮನುಷ್ಯನಿಗೆ ಔದಾರ್ಯದ ಹಾದಿಯನ್ನು, ಅದು ಕೊಡುವ ನೆಮ್ಮದಿಯನ್ನು ತಿಳಿಸಿಕೊಡುವ ತಾಯಿ 'ಸಂಸ್ಕೃತಿ' ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸ್ವಾರಸ್ಯ :*** ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ದಾನ ಮಾಡುವ ಮನೋಭಾವ, ಅಲ್ಲದೇ ದಾನ ಮಾಡಿದ ಮೇಲೆ ಎಷ್ಟೇ ಬೆಲೆಬಾಳುವ ವಸ್ತುವಾದರೂ ಅದರ ವ್ಯಾಮೋಹವನ್ನು ತೊರೆಯಬೇಕು. ತ್ಯಾಗ, ಔದಾರ್ಯ ಮನೋಭಾವಗಳನ್ನು ತಿಳಿಸುವುದು ಸಂಸ್ಕೃತಿಯೆನಿಸುವುದರಿಂದ ನಮ್ಮ ಭಾರತೀಯ ಸಂಸ್ಕೃತಿಯ ಅಂಶಗಳನ್ನು ಈ ವಾಕ್ಯದಲ್ಲಿ ಎತ್ತಿಹಿಡಿದಿರುವುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |
| 36. | "ತಿಂಗಳಿನೂರಿನ ನೀರನು ಹೀರಿ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದ.ರಾ. ಬೇಂದ್ರೆಯವರು ರಚಿಸಿರುವ 'ಗರಿ' ಕವನಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಕವಿ ಬೇಂದ್ರೆಯವರು ಕಾಲವನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಬಹಳ ಮನೋಜ್ಞವಾಗಿ 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯವನ್ನು ರಚಿಸಿದ್ದಾರೆ. ನಿರಂತರವಾಗಿ ಚಲಿಸುತ್ತಿರುವ ಕಾಲವೆಂಬ ಹಕ್ಕಿಯು ಶುಕ್ರಗ್ರಹವೆಂಬ ಬೆಳ್ಳಿಯ ಹಳ್ಳಿಯ ಮೇರೆಯನ್ನು ಮೀರಿ ಹಾರುತ್ತಿದೆ. ಚಂದ್ರನ ಲೋಕದ ಅಂಗಳಕ್ಕೂ ಹಾರಿದ್ದಲ್ಲದೇ ಮಂಗಳನ ಅಂಗಳಕ್ಕೆ ಕಾಲಿಟ್ಟು, ತಾನು ಆಡಲು, ಹಾರಾಡಲು ಹೊರಟಿದೆ, ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ. | |
| | ***ಸ್ವಾರಸ್ಯ :*** ಮಾನವನ ವೈಜ್ಞಾನಿಕ ಕ್ರಾಂತಿ, ಬೆಳವಣಿಗೆಗಳು ಹಾಗೂ ಶುಕ್ರ, ಚಂದ್ರ, ಮಂಗಳ ಲೋಕದ ಸಂಚಾರದ ದಾರ್ಶನಿಕ, ವೈಜ್ಞಾನಿಕ ಮುನ್ನೋಟಗಳು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 37. | "ಹಸುರು ಹಸುರಿಳೆಯುಸಿರೂ!"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಕುವೆಂಪು ವಿರಚಿತ 'ಪಕ್ಷಿಕಾಶಿ' ಕವನಸಂಕಲನದಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.<br>***ಸಂದರ್ಭ :*** ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರನ್ನು ಕಂಡು ಕವಿ ಮೂಕವಿಸ್ಮಿತರಾಗಿದ್ದಾರೆ. ಕವಿಗೆ ಎಲ್ಲೆಲ್ಲಿಯೂ ಹಸುರು ಬಣ್ಣವೇ ಗೋಚರಿಸುತ್ತಿದೆ. ಆಗಸ, ಮುಗಿಲು, ಮಲೆ, ಕಣಿವೆ ಎಲ್ಲೆಲ್ಲಿಯೂ ಹಸುರು. ಗದ್ದೆ, ಅಡಿಕೆಯ ತೋಟ, ಬಯಲಿನಲ್ಲೂ ಹಸುರು. ಹುಲ್ಲುಗಾವಲು ಮಕಮಲ್ಲಿನ ಜಮಖಾನೆ ಹರಡಿದಂತೆ ಕವಿಗೆ ಕಂಡಿದೆ. ಹೊಸ ಹೂವಿನ ಕಂಪು, ಎಲರಿನ ತಂಪು ಅಲ್ಲದೆ ಹಕ್ಕಿಯ ಕೊರಲಿನ ಮಧುರಗಾನದಲ್ಲೂ ಹಸುರಿನ ಅನುಭೂತಿಯನ್ನು ವರ್ಣಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.<br>***ಸ್ವಾರಸ್ಯ :*** ಪ್ರಕೃತಿಯ ಸೌಂದರ್ಯವೆಲ್ಲ ಹಸುರು ಮೇಳೈಸಿಕೊಂಡು ಈ ಭೂಮಿ ಹಚ್ಚಹಸುರಿನಿಂದ ಕಂಗೊಳಿಸಿದಾಗ ಮಾತ್ರ ಉಸಿರು ಇರಲು ಸಾಧ್ಯವೆಂಬ ಎಚ್ಚರಿಕೆಯ ಧ್ವನಿ ಹಾಗೂ ಕವಿ ಕಲ್ಪನೆಯ ಕಾವ್ಯ ಸೌಂದರ್ಯದೊಂದಿಗೆ ಹಸುರಿನ ಅಂದರೆ ಕಾಡಿನ ರಕ್ಷಣೆಯ ಅನಿವಾರ್ಯತೆಯನ್ನು ಸೂಚ್ಯವಾಗಿ ತಿಳಿಸಿರುವುದು ಸ್ವಾರಸ್ಯವಾಗಿದೆ. | |
| 38. | "ಈಗಳೊಂದಡಕೆಯುಮಿಲ್ಲ ಕೈಯೊಳ್"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಪಂಪಮಹಾಕವಿ ವಿರಚಿತ 'ವಿಕ್ರಮಾರ್ಜುನ ವಿಜಯಂ' ಕಾವ್ಯದಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಸಂದರ್ಭ :*** ದ್ರೋಣಾಚಾರ್ಯರಿಗೆ ಬಡತನವುಂಟಾಗಲು ಅವರು ಪರಶುರಾಮರ ಬಳಿಗೆ ಸಂಪತ್ತನ್ನು ಬಯಸಿ ಬರುತ್ತಾರೆ. ಪರಶುರಾಮರು ತಮ್ಮ ಬಳಿಯಿದ್ದ ಎಲ್ಲವನ್ನೂ ದಾನ ಮಾಡಿರುತ್ತಾರೆ. ಅವರ ಬಳಿ ಏನೂ ಇರುವುದಿಲ್ಲ. ಆಗ ಮನೆಗೆ ಬಂದ ದ್ರೋಣರಿಗೆ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ನೀಡುತ್ತಾರೆ. ಹಾಗೂ ತನ್ನ ಬಳಿಯಿದ್ದ ಒಡವೆಗಳನ್ನು ಬೇಡಿದವರಿಗೆ ಭೂಮಿಯನ್ನು ಗುರುವಿಗೆ ನೀಡಿದ್ದೆನೆಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.<br>***ಸ್ವಾರಸ್ಯ :*** 'ಅತಿಥಿ ದೇವೋಭವ' ಎಂಬ ಮಾತಿನಂತೆ ದ್ರವ್ಯಾರ್ಥಿಯಾಗಿ ಬಂದ ದ್ರೋಣರನ್ನು ಸತ್ಕರಿಸಲು ಹೊರಟಿರುವ ಪರಶುರಾಮರ ಮನೋಭಾವ ಹಾಗೂ ದಾನಮಾಡಲು ಮನೆಯಲ್ಲಿ ಒಂದು ಅಡಿಕೆಯೂ ಇಲ್ಲದ ಪರಿಸ್ಥಿತಿಯಲ್ಲಿ ದ್ರೋಣರಿಗೆ ದಾನಮಾಡಲಾಗದೆಂಬ ಅಸಹಾಯಕತೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿವೆ. | |
| **X.**<br><br>39. | **ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :**<br>ಕೊಡಲಿ ..........................................................<br>..................................................................<br>..................................................................<br>.......................................................... ನಾನೆಷ್ಟಾ<br>**ಅಥವಾ**<br>ಸಿಕ್ಕದ್ದು ..........................................................<br>..................................................................<br>..................................................................<br>.......................................................... ಜನಕಾ | **1 × 4 = 4** |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ<br>ಉಪ್ಪು ಎಣ್ಣೆ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ<br>ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ<br>ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ | |
| | **ಅಥವಾ** | |
| | ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ<br>ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು<br>ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು<br>ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ | |
| **XI.** | **ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 40. | ಮತಗಳೆಲ್ಲವೂ ಪಥಗಳು ಎನ್ನುವ<br>ಹೊಸ ಎಚ್ಚರದೊಳು ಬದುಕೋಣ<br>ಭಯ–ಸಂಶಯದೊಳು ಕಂದಿದ ಕಣ್ಣೊಳು<br>ನಾಳಿನ ಕನಸನು ಬಿತ್ತೋಣ. | |
| | ***ಉತ್ತರ :*** | |
| | ಪ್ರಸ್ತುತ ಪದ್ಯಭಾಗವನ್ನು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ರಚಿಸಿರುವ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ. | |
| | ಜಗತ್ತಿನಲ್ಲಿ ಅನೇಕ ಜಾತಿ, ಮತ, ಪಂಥಗಳು, ಸಂಸ್ಕೃತಿ ಆಚರಣೆಗಳು ಅಸ್ತಿತ್ವದಲ್ಲಿವೆ. ಇಷ್ಟು ವೈವಿಧ್ಯತೆಯಿದ್ದರೂ ಏಕತೆಯಿಂದ ಬದುಕುವ ಅಗತ್ಯವಿದೆ 'ಮನುಷ್ಯ ಧರ್ಮವೊಂದೇ' ಎಂಬ ಅರಿವು | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಎಲ್ಲರಲ್ಲಿಯೂ ಮೂಡಬೇಕಾಗಿದೆ. ಅನೇಕ ಮತಗಳಿದ್ದರೂ ಕೂಡ ಅವೆಲ್ಲವೂ ಹೇಳುವುದು ಮೋಕ್ಷ ಅಥವಾ ಮುಕ್ತಿಯ ಮಾರ್ಗವನ್ನೇ. ಎಲ್ಲಾ ಮತಗಳು ನಮ್ಮ ಆತ್ಮೋನ್ನತಿಗೆ ಹಾಗೂ ಬದುಕನ್ನು, ಭವಿಷ್ಯವನ್ನು ಉತ್ತಮಗೊಳಿಸಲು ತೋರುವ ಸನ್ಮಾರ್ಗವೆಂದು ಭಾವಿಸಬೇಕು. ಅಲ್ಲದೆ ಅನ್ಯಮತಗಳನ್ನು ದ್ವೇಷಿಸದೆ, ಪರಸ್ಪರ ಗೌರವಭಾವದಿಂದ ಬದುಕಬೇಕು. ನಮಗೆ ಸನ್ಮಾರ್ಗವನ್ನು ತೋರುವ ಎಲ್ಲಾ ಮತಗಳನ್ನು ಸಹಿಸಿಕೊಳ್ಳುವ ವಿಶಾಲ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಭಯ, ಆತಂಕ, ಧಾರ್ಮಿಕ ಅಸಹಿಷ್ಣುತೆ, ಯುದ್ಧ ಭೀತಿಗಳಿಂದ ಕಂದಿರುವ ಕಣ್ಣುಗಳಲ್ಲಿ ನಾಳಿನ ಅಂದರೆ ಭವಿಷ್ಯದ ಉತ್ತಮ ಹಾಗೂ ಸುಂದರ ಕನಸನ್ನು ಬಿತ್ತಬೇಕಾಗಿದೆ.<br>ಯುವಕರು ದೃಢಸಂಕಲ್ಪ, ಧನಾತ್ಮಕ ಚಿಂತನೆ ಹಾಗೂ ವಿಶಾಲ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಜಾತಿ, ಮತ, ಪಂಥಗಳೆಂಬ ಸಂಕುಚಿತ ಭಾವನೆಗಳಾಚೆ ಬಂದು ವಿಶಾಲ ಮನೋಭಾವ ಬೆಳೆಸಿಕೊಂಡು, ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವುದಲ್ಲದೆ, ಸುಂದರ ಹಾಗೂ ಸ್ವಾಸ್ಥ್ಯ ಸಮಾಜವನ್ನು ನಿರ್ಮಿಸಬೇಕೆಂಬ ಸದಾಶಯ ಈ ಪದ್ಯಭಾಗದಲ್ಲಿ ವ್ಯಕ್ತಗೊಂಡಿರುವ ಮೌಲಿಕ ಅಂಶಗಳಾಗಿವೆ. | |
| **XII.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **2 × 4 = 8** |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 41. | ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿ ಧರ್ಮಾಧಿಕರಣರ ಬಳಿಗೆ ಬರಲು ಕಾರಣವೇನು ? ವಿವರಿಸಿ.<br>**ಅಥವಾ**<br>'ಮಾಡಿದ್ದುಣ್ಣೊ ಮಾರಾಯ' ಎಂಬ ಮಾತು ದುಷ್ಟಬುದ್ಧಿಗೆ ಹೇಗೆ ಅನ್ವಯಿಸುತ್ತದೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಉತ್ತರ :* ದುಷ್ಟಬುದ್ಧಿ ಹಾಗೂ ಧರ್ಮಬುದ್ಧಿಯೆಂಬ ಇಬ್ಬರು ವರ್ತಕರು ವ್ಯಾಪಾರ ಮಾಡಿ ದೊಡ್ಡ ಮೊತ್ತದ ಸಂಪತ್ತನ್ನು ಸಂಪಾದಿಸಿಕೊಂಡು ಬಂದು ತಮ್ಮ ಊರಿನ ಹೊರವಲಯದಲ್ಲಿದ್ದ ಉದ್ಯಾನವನದಲ್ಲಿ ತಂಗುತ್ತಾರೆ. ಮಧ್ಯರಾತ್ರಿಯಲ್ಲಿ ಧರ್ಮಬುದ್ಧಿ ದುಷ್ಟಬುದ್ಧಿಯನ್ನು ಕುರಿತು, ತಾವು ಸಂಪಾದಿಸಿದ ಸಂಪತ್ತನ್ನು ಸಮನಾಗಿ ಹಂಚಿಕೊಳ್ಳೋಣವೆಂದು ಹೇಳಿದಾಗ, ದುಷ್ಟಬುದ್ಧಿಯು ಎಲ್ಲಾ ಸಂಪತ್ತನ್ನು ತಾನೇ ಹೊಂದಬೇಕೆಂಬ ಕೆಟ್ಟ ಆಸೆಯಿಂದ ನಾವು ಈ ಸಂಪತ್ತನ್ನು ಹಂಚಿಕೊಂಡು ಮನೆಯಲ್ಲಿಯೇ ಸ್ವೇಚ್ಛೆಯಿಂದ ಇರುವವರಲ್ಲ. ಪುನಃ ವ್ಯಾಪಾರಕ್ಕೆ ಹೋಗಲೇಬೇಕು. ಆದ್ದರಿಂದ ನಮಗೆ ಅಗತ್ಯವಿರುವಷ್ಟು ಹೊನ್ನು ತೆಗೆದುಕೊಂಡು ಉಳಿದೆಲ್ಲವನ್ನೂ ಈ ಮರದ ಬುಡದಲ್ಲಿಯೇ ಅಡಗಿಸಿಟ್ಟು ಹೋಗೋಣವೆಂದು ಹೇಳುತ್ತಾನೆ. ಶುದ್ಧ ಮನಸ್ಸಿನ ಧರ್ಮಬುದ್ಧಿಗೆ ದುಷ್ಟಬುದ್ಧಿಯ ಕೆಟ್ಟ ಆಲೋಚನೆ ತಿಳಿಯುವುದಿಲ್ಲ. ಆತ ಸ್ನೇಹಿತನನ್ನು ನಂಬುತ್ತಾನೆ. ಅದರಂತೆ ಅವರಿಬ್ಬರೂ ಸಂಪತ್ತನ್ನು ಅಲ್ಲಿಯೇ ಹೂತಿಟ್ಟು ತಮ್ಮ ತಮ್ಮ ಮನೆಗೆ ತೆರಳುತ್ತಾರೆ. ದುಷ್ಟಬುದ್ಧಿಯು ಧರ್ಮಬುದ್ಧಿಗೆ ತಿಳಿಯದಂತೆ ತಾವು ಮುಚ್ಚಿಟ್ಟಿದ್ದ ಸಂಪತ್ತನ್ನು ತಾನೇ ಕದ್ದು ಮನೆಗೆ ತರುತ್ತಾನೆ. ಅಲ್ಲದೆ ತಾನೇ ಧರ್ಮಬುದ್ಧಿಯ ಮನೆಗೆ ಬಂದು ಖರ್ಚಿಗೆ ಸ್ವಲ್ಪ ಹೊನ್ನು ಬೇಕು ತೆಗೆದುಕೊಳ್ಳೋಣ ಎಂದು ಹೇಳಿ ಧರ್ಮಬುದ್ಧಿಯನ್ನು ಕರೆದುಕೊಂಡು ಹೋಗುತ್ತಾನೆ. ತಾವು ಅಡಗಿಸಿಟ್ಟ ಸ್ಥಳದಲ್ಲಿ ಸಂಪತ್ತು ಕಾಣದೆ ಇದ್ದಾಗ ಇನ್ನು ತಾನು ಹೇಳದಿದ್ದರೆ 'ಕಳ್ಳತನದ ಆರೋಪ' ತನ್ನ ಮೇಲೆ ಬರುವುದೆಂದು ಕುಟಿಲ ಬುದ್ಧಿಯವನಾದ ದುಷ್ಟಬುದ್ಧಿಯು 'ಕಳ್ಳನಿಗೆ ಸುಳ್ಳೇ ಬಲ' ಎಂಬ ಮಾತಿನಂತೆ ಹಾ! ತಾನು ಕೆಟ್ಟೆನೆಂದು ಬಾಯಿ, ಹೊಟ್ಟೆಯನ್ನು ಬಡಿದುಕೊಳ್ಳುತ್ತಾ, ಧರ್ಮಬುದ್ಧಿಯ ಮೇಲೆ "ಹೊನ್ನನ್ನೆಲ್ಲಾ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನೀನೇ ಕದ್ದಿದ್ದಿಯಾ!" ಎಂಬ ಆರೋಪವನ್ನು ಹೊರಿಸುತ್ತಾನೆ. ಈ ಕಳ್ಳತನದ ವ್ಯಾಜ್ಯವನ್ನು ಬಗೆಹರಿಸಿಕೊಳ್ಳುವ ಸಲುವಾಗಿ ಧರ್ಮಬುದ್ಧಿ ಹಾಗೂ ದುಷ್ಟಬುದ್ಧಿಯರಿಬ್ಬರೂ ಧರ್ಮಾಧಿಕರಣರ ಬಳಿಗೆ ಬರುತ್ತಾರೆ. | |
| | **ಅಥವಾ** | |
| | ಸ್ನೇಹಿತನಾದ ಧರ್ಮಬುದ್ಧಿಗೆ ಮೋಸಮಾಡಿ ತಾವಿಬ್ಬರೂ ಒಟ್ಟಾಗಿ ಸಂಪಾದಿಸಿರುವ ಸಂಪತ್ತನ್ನು ಕದಿಯುವಲ್ಲಿ ದುಷ್ಟಬುದ್ಧಿ ಯಶಸ್ವಿಯಾಗುತ್ತಾನೆ. ಅಲ್ಲದೆ ಧರ್ಮಾಧಿಕರಣರಿಗೆ ಧರ್ಮಬುದ್ಧಿಯೇ ಸಂಪತ್ತನ್ನು ಕದ್ದಿರುವುದಕ್ಕೆ ಅಲ್ಲಿರುವ ವಟವೃಕ್ಷವೇ ಸಾಕ್ಷಿಯೆಂದು ಹೇಳಿ ನಂಬಿಸುತ್ತಾನೆ. ತನ್ನ ತಂದೆಯಾದ ಪ್ರೇಮಮತಿಯನ್ನು ಮರದ ಪೊಟರೆಯಲ್ಲಿ ಕೂರಿಸಿ ಧರ್ಮಬುದ್ಧಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳಲು ಒಪ್ಪಿಸುತ್ತಾನೆ. ಅದರಂತೆ ಸಾಕ್ಷಿ ನುಡಿದಾಗ ಆಶ್ಚರ್ಯಚಕಿತನಾದ ಧರ್ಮಬುದ್ಧಿ ವೃಕ್ಷದೇವತೆ ಸಾಕ್ಷಿ ಹೇಳುವುದೇ ಆದರೆ 'ಸುಳ್ಳನ್ನು ಏಕೆ ಹೇಳುತ್ತಿದೆ ?' ಎಂದು ಆ ವಟವೃಕ್ಷಕ್ಕೆ ಪ್ರದಕ್ಷಿಣೆ ಹಾಕಿದಾಗ ಮರದ ಪೊಟರೆಯ ಬಳಿ ಮನುಷ್ಯ ಸಂಚಾರದ ಕುರುಹನ್ನು ಗಮನಿಸುತ್ತಾನೆ. ನಂತರ ಧರ್ಮಾಧಿಕರಣರ ಬಳಿಗೆ ಬಂದು ಸುಳ್ಳನ್ನು ಬಯಲು ಮಾಡಲು ಉಪಾಯ ಚತುರನಾದ ಧರ್ಮಬುದ್ಧಿಯು ಹೀಗೆ ಹೇಳುತ್ತಾನೆ. 'ಸುಳ್ಳಾಡದ ವ್ಯಾಪಾರಿಯೇ ಇಲ್ಲ' ಎಂಬ ಮಾತಿನಂತೆ ನಾನು ವ್ಯಾಪಾರಿಯಾದುದರಿಂದ ಇದು ನನ್ನ ವೃತ್ತಿಧರ್ಮ. ಲಾಭವನ್ನೆಲ್ಲ ನಾನೇ ಹೊಂದಬೇಕೆಂದು ಧರ್ಮಬುದ್ಧಿಯೆಂಬ ಹೆಸರಿನ ನಾನು ಅಧರ್ಮಬುದ್ಧಿಯಾಗಿ ಅಡಗಿಸಿಟ್ಟ ಸಂಪತ್ತನ್ನು ಕದ್ದು ಮನೆಗೆ ತೆಗೆದುಕೊಂಡು ಹೋಗಬೇಕೆನ್ನುವಾಗ ಬೆಳಗಾಯಿತು. ಹಾಗಾಗಿ ಸಂಪತ್ತನ್ನು ಮನೆಗೆ ತೆಗೆದುಕೊಂಡು ಹೋಗದೆ. ಈ ಮರದ ಪೊಟರೆಯಲ್ಲಿಯೇ ಅಡಗಿಸಿಟ್ಟಿದ್ದೆ. ಮರುದಿನ ಬಂದು ನೋಡಿದಾಗ ಆ | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸಂಪತ್ತಿಗೆ ಸರ್ಪವೊಂದು ಸುತ್ತಿಕೊಂಡಿತ್ತು. ತೆಗೆದುಕೊಳ್ಳಲು ಭಯವಾಗಿ ಇಲ್ಲಿಯೇ ಬಿಟ್ಟಿದ್ದೇನೆ. ಈಗ ನಿಮ್ಮೆಲ್ಲರ ಮುಂದೆ ಪೊಟರೆ ಒಳಗೆ ಬೆಂಕಿ ಹಾಕಿ ಆ ಸರ್ಪವನ್ನು ಓಡಿಸಿ ನಾನು ಕದ್ದಿರುವ ಹೊನ್ನನ್ನು ನಿಮಗೆ ಒಪ್ಪಿಸುತ್ತೇನೆಂದು ಅಲ್ಲೇ ಇದ್ದ ಒಣಗಿದ ಹುಲ್ಲು ಕಡ್ಡಿಗಳನ್ನು ಪೊಟರೆಯೊಳಗೆ ತುಂಬಿಸಿ ಬೆಂಕಿ ಹಾಕುತ್ತಾನೆ. ಹೊಗೆ ಆವರಿಸಿಕೊಂಡಾಗ ಅದರೊಳಗೆ ಅಡಗಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಉಸಿರುಗಟ್ಟಿ ಹೊರಳಾಡುತ್ತಾ ಹೊರಗೆ ಬಂದು ಪ್ರಾಣಬಿಡುತ್ತಾನೆ. ಹೀಗೆ ದುಷ್ಟಬುದ್ಧಿಯ ಕುತಂತ್ರವನ್ನು ಬಯಲು ಮಾಡುತ್ತಾನೆ.<br>ಹೆಸರಿಗೆ ತಕ್ಕ ಹಾಗೆ 'ದುಷ್ಟ'ಬುದ್ಧಿಯವನಾದ ದುಷ್ಟಬುದ್ಧಿಯ ಕಳ್ಳತನ ಎಲ್ಲರಿಗೂ ತಿಳಿಯುತ್ತದೆ. ತನ್ನ ದುಷ್ಟತನದಿಂದ ತನ್ನ ತಂದೆಯನ್ನು ಕಳೆದುಕೊಂಡದ್ದಲ್ಲದೆ ಧರ್ಮಾಧಿಕರಣರು ನೀಡುವ ಶಿಕ್ಷೆಗೂ ಆತ ಗುರಿಯಾಗುತ್ತಾನೆ. ಹೀಗೆ 'ಮಾಡಿದ್ದುಣ್ಣೊ ಮಾರಾಯ' ಎಂಬ ಮಾತು ದುಷ್ಟಬುದ್ಧಿಗೆ ಅನ್ವಯಿಸುತ್ತದೆ. | |
| 42. | ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವಾದ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ.<br>**ಅಥವಾ**<br>ಲವನಲ್ಲಿದ್ದ ಸಹಜ ಕ್ಷಾತ್ರಗುಣ 'ವೀರಲವ' ಪದ್ಯದಲ್ಲಿ ವ್ಯಕ್ತಗೊಂಡಿರುವುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.<br>***ಉತ್ತರ :***<br>ರಾಮನ ಅಶ್ವಮೇಧಯಾಗದ ಕುದುರೆ ದೇಶದೇಶಗಳಲ್ಲಿ ಸಂಚರಿಸುತ್ತದೆ. ಶ್ರೀರಾಮನ ಯಾಗದ ಕುದುರೆ ಎಂದು ತಿಳಿದು ರಾಜ ಮಹಾರಾಜರುಗಳು ಅದನ್ನು ಕಟ್ಟಿ ಹಾಕದೆ ನಮಸ್ಕರಿಸಿ ಕಳುಹಿಸುತ್ತಾರೆ. ಹೀಗೆ ಭೂಮಂಡಲದಲ್ಲೆಲ್ಲಾ ಸಂಚರಿಸುತ್ತಾ ಬಂದ ಕುದುರೆ ವಾಲ್ಮೀಕಿ ಆಶ್ರಮದ ಉಪವನದ ಹುಲ್ಲನ್ನು ಕಂಡು ಆಕರ್ಷಿತವಾಗಿ ತಿನ್ನಲು | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬಯಸಿ ಉದ್ಯಾನವನ್ನು ಪ್ರವೇಶಿಸಿತು. ಅಲ್ಲಿದ್ದ ಹೂವಿನ ಗಿಡಗಳನ್ನು ಚೆನ್ನಾಗಿ ತುಳಿದು ಹುಲ್ಲನ್ನು ತಿನ್ನಲಾರಂಭಿಸಿತು. ಉದ್ಯಾನವನದ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಲವನು ಕುದುರೆಯನ್ನು ಕಟ್ಟಿಹಾಕಲು ಬಂದಾಗ ಅದರ ಹಣೆಯಲ್ಲಿದ್ದ ಲೇಖನವನ್ನು ಓದುತ್ತಾನೆ. "ಈ ಭೂಮಿಯಲ್ಲಿ ಕೌಸಲ್ಯೆಯ ಮಗ ರಾಮನೊಬ್ಬನೇ ವೀರನು. ಅವನ ಯಾಗದ ಕುದುರೆಯಿದು. ಇದನ್ನು ಕಟ್ಟಿಹಾಕುವ ವೀರರು ಯಾರಾದರೂ ಇದ್ದರೆ ಕಟ್ಟಿಹಾಕಬಹುದು." ಈ ಮಾತುಗಳಿಂದ ಲವನು ಕೋಪಗೊಳ್ಳುತ್ತಾನೆ. ಕೌಸಲ್ಯೆಯ ಮಗ ರಾಮನು ಮಾತ್ರ ವೀರನೇ ? ಜಾನಕಿಯ ಮಗನಾದ ನಾನು ವೀರನಲ್ಲವೇ ? ತಾನೀಗ ಕುದುರೆಯನ್ನು ಕಟ್ಟಿಹಾಕದಿದ್ದರೆ ಲೋಕದ ಜನರು ತನ್ನ ಮಾತೆಯಾದ ಜಾನಕಿಯನ್ನು ಬಂಜೆಯೆನ್ನದೆ ಇರುವರೇ ? ಎಂದು ತನ್ನ ಉತ್ತರೀಯದಿಂದ ಆ ಕುದುರೆಯನ್ನು ಬಾಳೆಗಿಡಕ್ಕೆ ಕಟ್ಟಿಹಾಕಲು ಮುಂದಾಗುತ್ತಾನೆ. ಆಗ ಅಲ್ಲಿದ್ದ ತಪಸ್ವಿಪುತ್ರರು ಅದು ಅರಸನ ಕುದುರೆ ಅದನ್ನು ಕಟ್ಟಿಹಾಕಿದರೆ ನಮ್ಮನ್ನು ಹೊಡೆಯುವರು ಎಂದು ಬಾಲಸಹಜ ಭಯದಿಂದ ಹೇಳಿದಾಗ, "ಋಷಿಯ ಮಕ್ಕಳಾದ ನೀವು ಅಂಜಿದರೆ ಕ್ಷತ್ರಿಯ ಕುಲಜನಾದ ನಾನು ಹೆದರುವುದೇ ?" ಎಂದು ಆ ಕುದುರೆಯನ್ನು ಕಟ್ಟಿಹಾಕುತ್ತಾನೆ. | |
| | **ಅಥವಾ** | |
| | ಸೀತೆಯ ಅಗಲುವಿಕೆಯಿಂದ ದುಃಖತಪ್ತನಾದ ರಾಮನು ಬ್ರಹ್ಮಹತ್ಯಾದೋಷವನ್ನು ಪರಿಹರಿಸಿಕೊಳ್ಳಲು ಅಶ್ವಮೇಧಯಾಗವನ್ನು ಕೈಗೊಂಡು, ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ದೇಶದೇಶಗಳನ್ನು ಸುತ್ತಾಡಿದ ಅಶ್ವಮೇಧ ಯಾಗದ ಕುದುರೆ ವಾಲ್ಮೀಕಿ ಆಶ್ರಮದ ಉಪವನದಲ್ಲಿದ್ದ ಹಸುರು ಹುಲ್ಲನ್ನು ತಿನ್ನಲು ಬಯಸಿ ಉಪವನವನ್ನು ಪ್ರವೇಶಿಸುತ್ತದೆ. ಇದನ್ನು | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕಂಡ ಲವನು ಕುದುರೆಯ ಬಳಿಗೆ ಬರುತ್ತಾನೆ. ಅದರ ಹಣೆಯ ಪಟ್ಟಿಯಲ್ಲಿದ್ದ ಲೇಖನವನ್ನು ಓದುತ್ತಾನೆ. ಅದರಲ್ಲಿ ಬರೆದಿದ್ದ, 'ಈ ಭೂಮಿಯಲ್ಲಿ ಕೌಸಲ್ಯೆಯ ಮಗ ರಾಮನೊಬ್ಬನೇ ವೀರನೆಂಬ' ಮಾತು ಲವನ ಕ್ಷಾತ್ರಗುಣವನ್ನು ಕುದಿಯುವಂತೆ ಮಾಡುತ್ತದೆ. ಹಾಗಾದರೆ ಜಾನಕಿಯ ಮಗನಾದ ನಾನು ವೀರನಲ್ಲವೇ ? ಈ ಕುದುರೆಯನ್ನು ಕಟ್ಟಿಹಾಕದಿದ್ದರೆ ಲೋಕದ ಜನರು ತನ್ನ ಮಾತೆಯಾದ ಜಾನಕಿಯನ್ನು ಬಂಜೆಯೆಂದು ಭಾವಿಸುವುದಿಲ್ಲವೇ ? ಎಂದು ಆ ಕುದುರೆಯನ್ನು ತನ್ನ ಉತ್ತರೀಯದಿಂದ ಬಾಳೆಗಿಡಕ್ಕೆ ಕಟ್ಟಿಹಾಕಲು ಮುಂದಾಗುತ್ತಾನೆ. ಆಗ ಅಲ್ಲಿದ್ದ ಮುನಿಕುಮಾರರು ಹೆದರಿ ಅದು ರಾಜರ ಕುದುರೆ ಕಟ್ಟಿಹಾಕಿದರೆ ನಮ್ಮನ್ನು ಬಡಿಯುವರೆಂದು ಹೇಳಲು "ಪಾರ್ವರ ಮಕ್ಕಳು ಅಂಜಿದರೆ ಜಾನಕಿಯ ಮಗನಾದ ನಾನು ಹೆದರುವುದೇ ?" ಎಂದು ಹೇಳಿ ಕುದುರೆಯನ್ನು ಕಟ್ಟಿಹಾಕಿ ಬಿಲ್ಲನ್ನು ಹೆದೆಯೇರಿಸಿ ಯುದ್ಧಕ್ಕೆ ಸನ್ನದ್ದನಾಗಿ ನಿಲ್ಲುತ್ತಾನೆ.<br><br>ಕ್ಷತ್ರಿಯ ಕುಲದ ಜಾನಕಿಯ ಮಗನಾದರೂ ಲವ ಋಷಿಗಳ ಆಶ್ರಮದಲ್ಲಿ ಹುಟ್ಟಿ ಅದೇ ವಾತಾವರಣದಲ್ಲಿ ಬೆಳೆಯುತ್ತಾನೆ. ಆದರೆ ಅವನಿಗೆ ಕ್ಷಾತ್ರಗುಣ, ವೀರತೆ ರಕ್ತದಿಂದಲೇ ಮೈಗೂಡಿದೆ. ಚಿಕ್ಕಬಾಲಕನಾದರೂ ಹೆದರದೆ ರಾಮನಂತಹ ಪರಾಕ್ರಮಿ ರಾಜನ ಕುದುರೆಯೆಂದು ತಿಳಿದು ಸಹ ಅದನ್ನು ಕಟ್ಟಿಹಾಕಲು ಲವ ಹಿಂಜರಿಯುವುದಿಲ್ಲ. ತಾನು ಚಿಕ್ಕವನು, ಅಸಮರ್ಥ ಎಂದು ಕೊರಗದೆ ದಿಟ್ಟತನದಿಂದ ಎದುರಿಸಬೇಕೆಂದು ಯೋಚಿಸಿರುವುದು, ಆತನ ಬಾಲ್ಯಸಹಜ ಸಾಹಸ ಪ್ರವೃತ್ತಿ ಹಾಗೂ ಸಹಜ ಕ್ಷಾತ್ರಗುಣ ಮನೋಜ್ಞವಾಗಿ ಚಿತ್ರಿತವಾಗಿದೆ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **XIII.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4** <br> **( 2 + 2 )** |
| 43. | ಬಿ.ವಿ. ಕಾರಂತರು ಹುಟ್ಟಿದ್ದು ಬಂಟ್ವಾಳ ತಾಲೂಕಿನ ಬಾಬುಕೋಡಿ ಎಂಬ ಗ್ರಾಮದಲ್ಲಿ. ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ತಾಯಿ ಲಕ್ಷ್ಮಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತ ಮುತ್ತಲ ಊರುಗಳ ಜಾತ್ರೆ, ಭೂತಕೋಲ, ರಥೋತ್ಸವ, ಪಾಡ್ದನಗಳು, ಪಾತ್ರಿಯ ದರ್ಶನ, ವಾದ್ಯಗಳ ಧ್ವನಿ ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ. <br><br> ಕನ್ನಡ ರಂಗಭೂಮಿಯನ್ನೇ ಏಕೆ, ಇಡೀ ಭಾರತದ ಅನೇಕ ರಂಗಭೂಮಿಗಳನ್ನು ಶ್ರೀಮಂತಗೊಳಿಸಿದವರು ಕಾರಂತರು. ಅವರು ತಮ್ಮ ಪ್ರಯೋಗಗಳಿಗೆ ಒಂದು ನಿರ್ದಿಷ್ಟ ಶೈಲಿ ರೂಢಿಸಿದವರಲ್ಲ. ಅಲ್ಲಲ್ಲಿಗೆ ಸಿಗುವ ಸಂಪನ್ಮೂಲಗಳನ್ನಾಶ್ರಯಿಸಿ, ಅಲ್ಲಿಗೆ ತಕ್ಕದ್ದೆನಿಸುವ ನಾಟಕ ಹುಡುಕಿ ಆಡಿಸುವ ಪ್ರವೃತ್ತಿ ಅವರದು. ಬಾಲ್ಯದಲ್ಲಿ ಶಾಲೆ–ಮನೆ ಎರಡರಿಂದಲೂ ವಂಚಿತರಾದ ಕಾರಂತರು 'ಮಕ್ಕಳ ಸ್ಕೂಲ್ ರಂಗಭೂಮಿಯಲ್ಲಿ' ಎಂಬಂತೆ ಮಕ್ಕಳ ರಂಗಭೂಮಿಗೆ ಶ್ರಮಿಸಿದರು. ಮಕ್ಕಳಿಗಾಗಿ ನಾಟಕ ರಚಿಸಿ, ನಿರ್ದೇಶಿಸಿದ್ದಾರೆ. ಪಂಜರ ಶಾಲೆ, ಕಿಂದರಿ ಜೋಗಿ, ಮೂಕನ ಮಕ್ಕಳು ಮೊದಲಾದ ನಾಟಕಗಳನ್ನು ಮಕ್ಕಳಿಗಾಗಿ ಮಾಡಿಸಿದ್ದಾರೆ. ಮಕ್ಕಳ ರಂಗದ ಕಲ್ಪನೆಯ ಮೂಲಕ ಚಿಣ್ಣರಿಗಾಗಿ ಹೊಸ ರಂಗಲೋಕ ನಿರ್ಮಿಸಿದವರು ಕಾರಂತರು. <br> ***ಪ್ರಶ್ನೆಗಳು:*** <br> ಅ) ಮಕ್ಕಳ ರಂಗಭೂಮಿಗೆ ಕಾರಂತರ ಕೊಡುಗೆಗಳೇನು ? <br> ಬ) ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾಶ್ರೀಮಂತಿಕೆಯ ಬಗೆಗಳಾವುವು ? | |

| | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಉತ್ತರ :* | |
| | ಅ) ಕಾರಂತರು 'ಮಕ್ಕಳ ಸ್ಕೂಲ್ ರಂಗಭೂಮಿಯಲ್ಲಿ' ಎಂಬಂತೆ ಮಕ್ಕಳ ರಂಗಭೂಮಿಗೆ ಶ್ರಮಿಸಿದರು. ಮಕ್ಕಳಿಗಾಗಿ ನಾಟಕ ರಚಿಸಿ, ನಿರ್ದೇಶಿಸಿದ್ದಾರೆ. ಪಂಜರ ಶಾಲೆ, ಕಿಂದರಿ ಜೋಗಿ, ಮೂಕನ ಮಕ್ಕಳು ಮೊದಲಾದ ನಾಟಕಗಳನ್ನು ಮಕ್ಕಳಿಗಾಗಿ ಮಾಡಿಸಿದ್ದಾರೆ. ಮಕ್ಕಳ ರಂಗದ ಕಲ್ಪನೆಯ ಮೂಲಕ ಚಿಣ್ಣರಿಗಾಗಿ ಹೊಸ ರಂಗಲೋಕ ನಿರ್ಮಿಸಿದವರು ಕಾರಂತರು. | |
| | ಬ) ತಾಯಿ ಲಕ್ಷ್ಮಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತ ಮುತ್ತಲ ಊರುಗಳ ಜಾತ್ರೆ, ಭೂತಕೋಲ, ರಥೋತ್ಸವ, ಪಾಡ್ದನಗಳು, ಪಾತ್ರಿಯ ದರ್ಶನ, ವಾದ್ಯಗಳ ಧ್ವನಿ ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ. | |
| **XIV.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 44. | ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಭಾರ್ಗವ' ಎಂದು ಭಾವಿಸಿಕೊಂಡು, 'ಪರೀಕ್ಷಾ ಸಮಯದಲ್ಲಿ ರಾತ್ರಿವೇಳೆ ವಿದ್ಯುತ್ ಪೂರೈಕೆಯಲ್ಲಿ ಕಡಿತ ಮಾಡದಂತೆ' ಕೋರಿ ವಿದ್ಯುಚ್ಛಕ್ತಿಮಂಡಳಿಯ ಮುಖ್ಯ ಇಂಜಿನಿಯರ್‌ರವರಿಗೆ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ರಾಮನಗರದ ಸರ್ಕಾರಿ ಪ್ರೌಢಶಾಲೆಯ 'ಭರತ್' ಎಂದು ಭಾವಿಸಿಕೊಂಡು, ಶಾಲೆಯ 'ಪೋಷಕರ ಸಭೆ' ಗೆ ಆಹ್ವಾನಿಸಿ ತೀರ್ಥಹಳ್ಳಿಯಲ್ಲಿ ವಾಸವಾಗಿರುವ 'ಶಾರದಾ' ಎಂಬ ಹೆಸರಿನ ತಾಯಿಯವರಿಗೆ ಪತ್ರ ಬರೆಯಿರಿ. | |

| | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ತಾಯಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| **XV.** | **ಪ್ರಬಂಧ ಬರೆವಣಿಗೆ :** | **1 × 5 = 5** |
| 45. | ಮಹಿಳಾ ಸಬಲೀಕರಣ. | |
| | **ಅಥವಾ** | |
| | ಶಾಲಾ ಆವರಣ ಹಾಗೂ ಶೌಚಾಲಯ ಸ್ವಚ್ಛತೆ. | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |